723(870) ಶ್ರೀ ಮಹಾಗುಂಡಪ್ಪ ಕಲ್ಲಪ್ಪ ಪಟ್ಟಣಶೆಟ್ಟಿ (ಬಾದಾಮಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು (ಬಾದಾಮಿ ತಾಲ್ಲೂಕು) ಗ್ರಾಮಕ್ಕೆ 33 ಕೆ.ವಿ. ಸ್ಟೇಷನ್ ಮಂಜೂರಾಗಿದ್ದು ಯಾವಾಗ;

ಆ) ಮಂಜೂರಾಗಿದ್ದಲ್ಲಿ, ಟೆಂಡರ್ ಎಂದು ಕರೆಯಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಾದಾಮಿ ತಾಲ್ಲೂಕಿನ ಬೇಲೂರಿನಲ್ಲಿ ಒಂದು 33/11 ಕೆ.ವಿ. ವಿದ್ಯುತ್ ಸಬ್ ಸ್ಟೇಷನನ್ನು ಸ್ಥಾಪಿಸಲು ಆಗಸ್ಟ್–2005 ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ಆ) ಈ ಉದ್ದೇಶಿತ 33/11 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಮತ್ತು ಇದಕ್ಕೆ ಸಂಬಂಧಿಸಿದ 33 ಕೆ.ವಿ. ವಿದ್ಯುತ್ ಲೈನು–ಇವುಗಳ ನಿರ್ಮಾಣಕ್ಕೆ ಈಗಾಗಲೇ ಅಂದರೆ ಜನವರಿ 2006ರಲ್ಲಿಯೇ ಟೆಂಡರನ್ನು ಕರೆಯಲಾಗಿದೆ.

724(924) ಶ್ರೀ ಮಹಾಗುಂಡಪ್ಪ ಕಲ್ಲಪ್ಪ ಪಟ್ಟಣಶೆಟ್ಟಿ (ಬಾದಾಮಿ) : ಮಾನ್ಯ ಪ್ರವಾಸೋದ್ಯಮ, ಜವಳಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟದಕಲ್ಲು ಹಾಗೂ ಬಾದಾಮಿಗೆ ಶಬ್ದ ಮತ್ತು ಬೆಳಕು ಯೋಜನೆ ಮಂಜೂರು ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು;

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ, ಜವಳಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವರು) :

ಅ) ಈ ಯೋಜನೆಯು ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

726(975) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ 18–20 ವರ್ಷಕ್ಕೂ ಹೆಚ್ಚಿನ ಸಮಯದಿಂದ ಸೇವೆಯಲ್ಲಿರುವ ದಿನಗೂಲಿ ನೌಕರರು ಖಾಯಮಾತಿ ಯಾಗಿಲ್ಲದಿರುವುದು ಸರ್ಕಾರದ ಗಮನದಲ್ಲಿಯೇ;

ಆ) ಹಾಗಿದ್ದಲ್ಲಿ ಅವರುಗಳನ್ನು ಮಾನವೀಯತೆ ಆಧಾರದ ಮೇರೆಗೆ ಖಾಯಮಾತಿ ಮಾಡುವ ಕುರಿತು ಸರ್ಕಾರ ಮನಗಂಡಿದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಖಾಯಮಾತಿ ಮಾಡಲಾಗುವುದು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 8307–11/83 ರಲ್ಲಿ ದಿನಾಂಕ: 23.2.1990 ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 2 ಎಸ್ಎಲ್ಸಿ 90 ದಿನಾಂಕ 6.8.1990ನ್ನು ಹೊರಡಿಸಲಾಗಿದ್ದು ಸದರಿ ಆದೇಶದ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1.7.1984 ರಂದು ಅಥವಾ ಅದಕ್ಕಿಂತ ಹಿಂದೆ ತೊಡಗಿಸಲಾದ ಸಾಂದರ್ಭಿಕ/ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲಾಗಿದೆ. ಈ ಆದೇಶದಲ್ಲಿ ದಿನಾಂಕ 1.7.1984ರ ನಂತರ ಸಾಂದರ್ಭಿಕ/ದಿನಗೂಲಿ ಆಧಾರದ ಮೇಲೆ ಮಾಡಿರುವ ಎಲ್ಲಾ ನೇಮಕಾತಿಗಳು ಸ್ವಯಂಚಾಲಿತವಾಗಿ ರದ್ದಾಗುವುದೆಂದು ಆದೇಶಿಸಲಾಗಿತ್ತು. ನ್ಯಾಯಾಲಯವು ಈ ನೌಕರರನ್ನು ಸೇವೆಯಿಂದ ತೆಗೆದು ಹಾಕದಂತೆ ತಡೆಯಾಜ್ಞೆ ನೀಡಿದ್ದರಿಂದ ಇವರುಗಳ ಸೇವೆಯನ್ನು ಮುಂದುವರಿಸಲಾಗಿದೆ.

ಆ) ದಿನಾಂಕ 1.7.84ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ಅವಕಾಶವಿಲ್ಲವೆಂದು ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಮೇಲ್ಮನವಿ ಸಂಖ್ಯೆ: 120 ಮತ್ತು 128–329/1999 ರಲ್ಲಿ ದಿನಾಂಕ 1.2.2001 ರಂದು ತೀರ್ಪನ್ನು ನೀಡಿತ್ತು. ಈ ತೀರ್ಪಿನ ವಿರುದ್ಧ ಕರ್ನಾಟಕ ಸಾಂದರ್ಭಿಕ ಹಾಗೂ ದಿನಗೂಲಿ ನೌಕರರ ಸಂಘ, ಹುಬ್ಬಳ್ಳಿಯು ಸರ್ವೋನ್ನತ ನ್ಯಾಯಾಲಯದಲ್ಲಿ ಎಸ್ಎಲ್ಪಿ ಸಂಖ್ಯೆ: 3112–3314/2001ನ್ನು ಸಲ್ಲಿಸಿತ್ತು (ಸಿವಿಲ್ ಅಪೀಲು ಸಂಖ್ಯೆ: 1861–2063/2001).

ಇ) ಮೇಲ್ಕಂಡ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಐದು ನ್ಯಾಯಾಧೀಶರ ಸಂವಿಧಾನ ಪೀಠವು ದಿನಾಂಕ 10.4.2006 ರಂದು ತೀರ್ಪನ್ನು ನೀಡಿದ್ದು ಸಂಘದ ಸಿವಿಲ್ ಅಪೀಲನ್ನು ವಜಾಗೊಳಿಸಿದೆ. ಸಂಬಂಧಿತ ನೇಮಕಾತಿ ನಿಯಮಗಳನ್ನು ಅನುಸರಿಸದೆ ಮಾಡಿರುವ ನೇಮಕಾತಿಗಳನ್ನು ಸಕ್ರಮಗೊಳಿಸುವ ಬಗ್ಗೆ ನ್ಯಾಯಾಲಯಗಳು ವಿಭಿನ್ನ ರೀತಿಯ ತೀರ್ಪುಗಳನ್ನು ನೀಡುತ್ತಿದ್ದುದರಿಂದ ಉದ್ಭವಿಸಿದ ಸ್ಥಿತಿಯನ್ನು ಗಮನಿಸಿದ ನ್ಯಾಯಾಲಯವು ದಿನಗೂಲಿಯ ನೌಕರರು ಅಥವಾ ಒಪ್ಪಂದದ ಮೇಲೆ ಕಾರ್ಯನಿರ್ವಹಿಸುವ ನೌಕರರು ಹೆಚ್ಚು ಸಮಯ ಹಾಗೆ ಕಾರ್ಯನಿರ್ವಹಿಸಿದ್ದಾರೆ ಎಂಬ ಕಾರಣಕ್ಕೆ ಸೇವಾ ಸಕ್ರಮಾತಿಗೆ ಹಕ್ಕನ್ನು ಪಡೆಯುವುದಿಲ್ಲವೆಂದು ಹೇಳಿದೆ. ಅಲ್ಲದೆ ಇನ್ನು

ಮುಂದೆ ಸಂವಿಧಾನಾತ್ಮಕವಾಗಿ ನಿಗಧಿ ಪಡಿಸಿದ ವಿಧಾನದ ಅನುಸಾರ ನೇಮಕಗೊಳ್ಳದ ವ್ಯಕ್ತಿಗಳ ಸೇವೆಯನ್ನು ಸಕ್ರಮಗೊಳಿಸಲು ಅಥವಾ ಅವರ ಸೇವೆಯನ್ನು ಖಾಯಂಗೊಳಿಸಲು ಕ್ರಮ ಕೈಗೊಳ್ಳಬಾರದೆಂದು ಆದೇಶಿಸಿದೆ. ಆದರೆ ನಿಗದಿತ ನೇಮಕಾತಿ ವಿಧಾನವನ್ನು ಬಹು ಪಾಲು ಪಾಲಿಸಿ ಮಾಡಿದ ನೇಮಕಾತಿಗಳನ್ನು ಒಂದು ಬಾರಿಯ ಕ್ರಮವಾಗಿ ಕೆಲವು ಷರತ್ತುಗಳನ್ನು ಪೂರೈಸಿದಲ್ಲಿ ಸಕ್ರಮಗೊಳಿಸಬಹುದೆಂದು ಈ ತೀರ್ಪಿನಲ್ಲಿ ಹೇಳಲಾಗಿದೆ. ಅವುಗಳೆಂದರೆ ಮಂಜೂರಾದ ಹುದ್ದೆಯಲ್ಲಿ ನೇಮಕಾತಿ ಮಾಡಿರಬೇಕು: ನೇಮಕಾತಿ ಮಾಡುವಾಗ ನೇಮಕಾತಿಗೆ ನಿಗದಿಪಡಿಸಿದ ಅರ್ಹತೆಯನ್ನು ಹೊಂದಿರಬೇಕು: ಹತ್ತು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಸತತವಾಗಿ ಕಾರ್ಯ ನಿರ್ವಹಿಸಿರಬೇಕು ಮತ್ತು ನ್ಯಾಯಾಲಯಗಳ ಅಥವಾ ನ್ಯಾಯ ಮಂಡಳಿಗಳ ಆದೇಶಗಳಿಂದಾಗಿಯೇ ಹತ್ತು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಮುಂದುವರಿದಿರಬಾರದು. ನ್ಯಾಯಾಲಯದ ಈ ತೀರ್ಪಿನ ಹಿನ್ನೆಲೆಯಲ್ಲಿ ದಿನಾಂಕ 1.7.1984ರ ನಂತರ ಸೇವೆಯಲ್ಲಿ ತೊಡಗಿಸಲಾದ ದಿನಗೂಲಿ ನೌಕರರ ಪ್ರಕರಣಗಳ ಕುರಿತು ಎಲ್ಲಾ ಇಲಾಖೆಗಳ ಸಕ್ಷಮ ನೇಮಕಾತಿ ಪ್ರಾಧಿಕಾರಗಳು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ದಿನಾಂಕ 25.5.2006 ರಂದು ಸುತ್ತೋಲೆಯ ಮುಖೇನ ತಿಳಿಸಲಾಗಿದೆ.

727(976) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಮಟಾ ತಾಲ್ಲೂಕಿನ ತದಡಿಯಲ್ಲಿ ಉಷ್ಣ ವಿದ್ಯುತ್ ಸ್ಥಾವರ ನಿರ್ಮಾಣದಿಂದ ಪರಿಸರದ ಮೇಲೆ ತೀವ್ರ ದುಷ್ಪರಿಣಾಮ ವುಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನಾಗರೀಕರೆ ತೀವ್ರ ಪ್ರತಿರೋಧ ಮನಗಂಡು ಸದರಿ ಯೋಜನೆ ಕೈಬಿಡಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಇತ್ತೀಚಿನ ಮಾಲಿನ್ಯ ನಿಯಂತ್ರಣ ಮಾರ್ಗೋಪಾಯಗಳನ್ನು ಹೊಂದಿರುವ ಆಧುನಿಕ ಉಷ್ಣ ವಿದ್ಯುತ್ ಸ್ಥಾವರವು ಪರಿಸರವನ್ನು ಹಾನಿಗೊಳಿಸುವುದಿಲ್ಲ. ಉದ್ದೇಶಿತ ತದ್ರಿ (ತದಡಿ) ಯೋಜನೆಯು ಪ್ರಾರಂಭಿಕ ಹಂತದಲ್ಲಿದೆ ಮತ್ತು ಪರಿಸರದ ಮೇಲಿನ ಪರಿಣಾಮ ಕುರಿತ ನಿರ್ಧಾರಣೆಯನ್ನು (ಅಸೆಸ್‌ಮೆಂಟ್) ನಡೆಸಬೇಕಾಗಿದೆ.

ಆ) ಉದ್ದೇಶಿತ ವಿದ್ಯುತ್ ಸ್ಥಾವರವನ್ನು ಸ್ಥಾಪಿಸುವುದರಿಂದ ಪರಿಸರದ ಮೇಲೆ ಆಗಬಹುದಾದ ಪರಿಣಾಮದ ಕುರಿತು ತಾಂತ್ರಿಕ ಪರಿಣತರು ಅಧ್ಯಯನವನ್ನು ಮಾಡಬೇಕಿದೆ. ತಾಂತ್ರಿಕ ಅಧ್ಯಯನವಿಲ್ಲದೆ ಪ್ರಸ್ತಾವನೆಯನ್ನು ಕೈಬಿಡಲು ಸಾಧ್ಯವಾಗುವುದಿಲ್ಲ.